ಶ್ರೀ ಬಿ. ಹುಚ್ಚೇಗೌಡ. ಇಲ್ಲಿ ತಾವು ಕೊಟ್ಟಿರುವ ಉತ್ತರದಲ್ಲಿ 750 ನಾಕ್ಗೆ ಚಿಡ್ ಹುದ್ದೆಗಳ ಪೈಕಿ 301 ಮಾತ್ರ backward communityಯಿಂದ ನೇಮಿಸಲ್ಪಟ್ಟಿದ್ದಾರೆ. 1950ನೆಯ ಆರ್ಡರ್ ಪ್ರಕಾರ ಕೇಡದ 70ರಷ್ಟಿರಬೇಕಲ್ಲವೇ ? ಹೀಗಿರುವಾಗ ಈ ರೀತಿ ಕಡಮೆಯಾಗಿರುವುದಕ್ಕೆ ಕಾರಣವೇನು ?

Sri Kadidal MANJAPPA.—Perhaps, dearth of qualified candidates in the beginning and want of vacancies later on.

ಶ್ರೀ ಬಿ. ಹುಚ್ಚೇಗೌಡ.—'Perhaps' ನನಗೆ ಬೇಕಾಗಿಲ್ಲ. ನನ್ನದು ನಿರ್ದಿಷ್ಟವಾದ ಪ್ರಶ್ನೆ.

Sri Kadidal MANJAPPA.—That is the most probable reason.

ಶ್ರೀ ಬಿ. ಹುಚ್ಚೇಗೌಡ.—ಹಾಗಾದರೆ ಇಷ್ಟೊತ್ತು qualified hands ಇಲ್ಲವೆಂದು ಹೇಳುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಇಷ್ಟೊತ್ತು ಇದ್ದಾರೆ, ಆದರೆ vacancies ಇಲ್ಲ.

ಶ್ರೀ ಬಿ. ಹುಚ್ಚೇಗೌಡ.—ಇಲ್ಲಿಯವರೆಗೆ ಎರಡು ವರ್ಷಗಳು appointmentಗಳನ್ನು ಮಾಡಿದ್ದೀರಲ್ಲಾ, ಈ ನಿಯಮವನ್ನು ಅನುಸರಿಸಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಈಚೆಗೆ ಅನುಸರಿಸಿದ್ದೇವೆ.

ಶ್ರೀ ಬಿ. ಹುಚ್ಚೇಗೌಡ.—ಮುಂದಾದರೂ ಈ ಕಡಮೆ ನುಜ್ಯೆಯನ್ನು ಸರಿಪಡಿಸುವುದಕ್ಕೆ ಪ್ರತಿಯೊಂದು ಕಮೂನಿಟಿಯಲ್ಲೂ ಸಾಕಷ್ಟು ಪ್ರಾತಿನಿಧ್ಯ ಬರುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ ?

Sri Kadidal MANJAPPA.—That is a constitutional provision. It will have to be implemented.

ಶ್ರೀ ಬಿ. ಹುಚ್ಚೇಗೌಡ.—Two posts have not been filled up ಎಂದು ಹೇಳಿದೆ. Hands ಇಲ್ಲದೆ ಹೀಗೆ ಬಿಟ್ಟಿದ್ದೀರಾ ಅಥವಾ ಸರ್ಕಾರದವರು ಮನಸ್ಸಿಲ್ಲದೆ ಹೀಗೆ ಬಿಟ್ಟಿದ್ದಾರೋ ?

Sri Kadidal MANJAPPA.—I require notice.

12-30 P.M.

ಶ್ರೀ ಬಿ. ರಾಚಯ್ಯ.—ಈ 37 ಜನ ಆಫೀಸರ್‌ಗಳಲ್ಲಿ ಡಿಪ್ರೆಸ್ಡ್ ಕ್ಲಾಸಿಗೆ ಸೇರಿದವರು ಎಷ್ಟು ಜನ ಗಳು ಇದ್ದಾರೆ ?

ಡಾ॥ ಆರ್. ನಾಗನಗೌಡ.—ಅದನ್ನು ಈಗ ಹೇಳುವುದಕ್ಕಾಗುವುದಿಲ್ಲ.

ಶ್ರೀ ಬಿ. ರಾಚಯ್ಯ.—ಶ್ರೀ ಪಿ. ಎಂ. ಪೊನ್ನಪ್ಪ ಎಂಬವರ ಅಪ್ಲಿಕೇಷನ್ನನ್ನು ಅವರಿಗೆ ಪ್ರಮೋಷನ್ ಕೊಡತಕ್ಕ ಸಂದರ್ಭದಲ್ಲಿ ಇತರ ಎಷ್ಟು ಜನರ ಅರ್ಜಿಗಳನ್ನು ಪರಾಂಬರಿಸಿರಬಹುದು ?

ಡಾ॥ ಆರ್. ನಾಗನಗೌಡ.—ಆ ವಿವರಗಳೆಲ್ಲಾ ಈಗ ನನ್ನಲ್ಲಿ ಇಲ್ಲ. ನಾನು ಅದನ್ನು ವಿಚಾರಮಾಡಿ ಪುನಃ ಪರಿಶೀಲನೆಮಾಡುತ್ತೇನೆ.

ಶ್ರೀ ಬಿ. ರಾಚಯ್ಯ.—ಬಾಕಿ ಅರ್ಹರಾದಂಥ ಇನೂ ಅನೇಕ ಜನರಿದ್ದಾಗ ಅವರೆಲ್ಲರ ಹಕ್ಕನ್ನೂ ತಿರಸ್ಕಾರ ಮಾಡಿ, ಇವರಿಗೆ ಅವರ ಮೇಲೆಲ್ಲಾ ಸೂಪರ್‌ಸೀಡ್ ಮಾಡಿ ಪ್ರಮೋಷನ್ ಕೊಡಲು ಕಾರಣವೇನು ?

ಡಾ॥ ಆರ್. ನಾಗನಗೌಡ.—ನೋಟೀಸ್.

ಶ್ರೀ ಬಿ. ರಾಚಯ್ಯ.—ಇಲಾಖಾ ಮುಖ್ಯಾಧಿಕಾರಿಗಳು ಎಲ್ಲರನ್ನೂ ಬಿಟ್ಟು ಬಿಟ್ಟು ಇವರಿಗೇ ಶಿಫಾರ್ಸು ಮಾಡಲು ಕಾರಣವೇನು ? ಇವರು ಅವರ ವಂಶೀಕರೆಂದು ಹಾಗೆ ಮಾಡಿದರೋ ?

ಡಾ॥ ಆರ್. ನಾಗನಗೌಡ.—ನೋಟೀಸ್.

ಶ್ರೀ ಬಿ. ರಾಚಯ್ಯ.—ಆ ಇಲಾಖಾ ಮುಖ್ಯಾಧಿಕಾರಿಗಳಿಗೂ ಇವರಿಗೂ ಏನಾದರೂ ಸಂಬಂಧ ವಿದೆಯೇ ?

ಡಾ॥ ಆರ್. ನಾಗನಗೌಡ.—ನೋಟೀಸ್.

ಶ್ರೀ ಎಂ. ಚಿಕ್ಕಲಿಂಗಯ್ಯ.—ಅರ್ಹರಾದಂಥವರಿನ್ನೂ ಹೆಚ್ಚಿಗೆ ಇದ್ದಾಗ್ಯೂ, ಬೆಟರ್ ಕ್ವಾಲಿಫೈಡ್ ಹ್ಯಾಂಡ್ಸ್‌ಗಳು ಇನ್ನೂ ಇದ್ದಾಗ್ಯೂ ಅಂಥವನ್ನೆಲ್ಲಾ ಕೈಬಿಟ್ಟು ಇವರಿಗೇ ಆ ಪ್ರಮೋಷನ್ ಕೊಡಲು ಕಾರಣವೇನು ?

Sri K. HANUMANTHAIYA.—As he said, we will look into that matter. We want notice of that question.

Electricity for I. P. Se's in Kolar D.s.r.ct.

Q.—570. Sri J. NARAYANAPPA (Chintamani—Scheduled Castes).—

Will the Government be pleased to state :—

(*a*) the number of persons who have requested for the supply of electricity to irrigation pumps for agricultural purposes in Kolar District from 1950 to date ;

(*b*) of them, how many are Harijans ;

(*c*) out of them, how many have been supplied with electricity to run the pumps ;

(*d*) out of them, how many Harijans have been given supply of electricity (information as to names to be given talukwar and villagewar) ?

A.—Dr. R. NAGAN GOWDA (Minister for Agriculture).—

(*a*) Number of applications received : 2,419.

(*b*) Information is not available.

(*c*) Power supply has been given in 1,213 cases.

(*d*) *Vide* answer to (*b*).

ಶ್ರೀ ಜೆ. ನಾರಾಯಣಪ್ಪ.—ಬಿ) ಪ್ರಶ್ನೆಗೆ ಉತ್ತರವಾಗಿ " ವಿವರಗಳು ದೊರೆಯುವಂತಿಲ್ಲ ಎಂದು " ತಿಳಿಸಿದ್ದೀರಿ. 1953ರಲ್ಲೇ ಆದಿಕರ್ನಾಟಕರ ಪೈಕಿ ದಾನಪ್ಪ ಎಂಬವರು ಅರ್ಜಿ ಕೊಟ್ಟು ರಿಕಾರ್ಡು ಆಗಿ 244 ರೂಪಾಯಿಗಳಿಗೆ ಎಸ್ಟಿಮೇಟಾಗಿತ್ತು. ಆ ಅರ್ಜಿ ಏನಾಯಿತೆಂಬುದನ್ನು ಕೇಳಿದ್ದೀರಾ ?

ಡಾ॥ ಆರ್. ನಾಗನಗೌಡ.—ತಮ್ಮ ಪ್ರಶ್ನೆಯನ್ನು ಮತ್ತೊಮ್ಮೆ ಕೇಳಿರಿ.

ಶ್ರೀ ಜೆ. ನಾರಾಯಣಪ್ಪ.—ತಮಗೆ 2419 ಅರ್ಜಿಗಳು ಬಂದಿರುವುದರಲ್ಲಿ ಆ ದಾನಪ್ಪನ ಅರ್ಜಿ ರಿಜಿನ್ಪರ್ ಮಾಡಿದ್ದೀರಾ?

ಅಧ್ಯಕ್ಷರು.—ತಾವು ಕೇಳತಕ್ಕ ಪ್ರಶ್ನೆ ಮಾನ್ಯ ಮಂತ್ರಿಗಳಿಗೆ ಅರ್ಥವಾಗಿಲ್ಲ. ಪುನಃ ನಿಮ್ಮ ಪ್ರಶ್ನೆಯನ್ನು ಅರ್ಥವಾಗುವಂತೆ ಕೇಳಿ.

ಶ್ರೀ ಜೆ. ನಾರಾಯಣಪ್ಪ.—ಉತ್ತರದಲ್ಲಿ ಹರಿಜನರ ಅರ್ಜಿಗಳು ಯಾವುದೂ ಬರಲಿಲ್ಲ ಎಂದು ಹೇಳಿದ್ದೀರಿ. 1953ರಲ್ಲಿ ಒಬ್ಬರು ಅರ್ಜಿ ಹಾಕಿದ್ದರು, ಅದು ರಿಕಾರ್ಡು ನಡೆದಿತ್ತು. ಅದು ಸರ್ಕಾರಕ್ಕೆ ಬರಲಿಲ್ಲವೇ ಎಂದು ಕೇಳುತ್ತಿದ್ದೇನೆ?

ಅಧ್ಯಕ್ಷರು.—ಹರಿಜನರ ಕಡೆಯಿಂದ ಅರ್ಜಿಗಳು ಬಂದಿಲ್ಲವೆಂದು ಅಲ್ಲಿ ತಿಳಿಸಿಲ್ಲ. ಹರಿ ಜನರಿಗಾಗಿಯೇ ಒಂದು ಪ್ರತ್ಯೇಕವಾದ ಪಟ್ಟಿಯನ್ನು ತಯಾರಿಸಿಲ್ಲವೆಂದು ಉತ್ತರದಲ್ಲಿ ತಿಳಿಸಲಾಗಿದೆ.

ಶ್ರೀ ಜೆ. ನಾರಾಯಣಪ್ಪ.—2 ಸಾವಿರ ಚಿಲ್ಲರೆ ಅರ್ಜಿಗಳು ಬಂದಿರುವಾಗ್ಗೆ ಇವರೊಬ್ಬರ ಅರ್ಜಿ ಹೇಗೆ ತಪ್ಪಿಹೋಯಿತು?

ಡಾ॥ ಆರ್. ನಾಗನ ಗೌಡ.—ತಾವು ಡೀಟೇಲಾಗಿ ವಿಚಾರ ತಿಳಿಸಿದರೆ ನಾನು ಆ ಸಮಾಚಾರವೇ ನಾಗಿರುತ್ತೆಂಬುದನ್ನು ವಿಚಾರ ಮಾಡುತ್ತೇನೆ.

ಶ್ರೀ ಜೆ. ನಾರಾಯಣಪ್ಪ.—ಡೀಟೇಲಾಗಿ ತಿಳಿಸಿದರೆ ತಾವು ಅವರಿಗೆ ಅನುಕೂಲಮಾಡಿಕೊಡುತ್ತೀರಾ?

Mr. SPEAKER.—Such questions should not be put.

Sri Mulka GOVINDA REDDY.—How is it, Sir that 1,206 applications have not been disposed of yet?

Mr. SPEAKER.—Nearly 50 per cent has been disposed and sanctioned. It is satisfactory.

Dr. R. NAGAN GOWDA.—There will be various reasons. It may not have been possible to supply current for these applicants.

Sri Mulka GOVINDA REDDY.—What are the reasons, Sir?

Sri H. SIDDAVEERAPPA.—I do not think there is any reason to complain so far as Kolar District is concerned. More than 50 per cent of the sets are located there.

Sri Mulka GOVINDA REDDY.—Will the Government be pleased to say how these 1,213 sets have been located talukwar?

Dr. R. NAGAN GOWDA.—That information is not here. I would like to have notice about it.

Sri Mulka GOVINDA REDDY.—Are the Government aware that they are concentrated only in one or two taluks?

Dr. R. NAGAN GOWDA.—No.

Sri Mulka GOVINDA REDDY.—Are the Government aware that they have not cared to supply power to Bagepally and Gudibanda taluks which are scarcity areas?

Dr. R. NAGAN GOWDA.—I have already said on an earlier occasion that we have been trying to make the supply to Bagepalli taluk also.

Sri B. V. NARAYANA REDDY.—How many applications have been received from Bagepalli and Gudibanda taluks, Sir?

Dr. R. NAGAN GOWDA.—I want notice.

Sri B. V. NARAYANA REDDY.—Sir, you have answered last time that 19 applications have been received and now you say that there are more than 100 applications; may I know what are the reasons for not sanctioning them as yet?

Dr. R. NAGAN GOWDA.—As a matter of fact, we are dealing with the question of supply of pump sets with rapidity and efficiency aud I think we will get to the end of this very quickly.

Sri K. HANUMANTHAIYA.—It was not possible to give power to all applicants.

Sri B. V. NARAYANA REDDY.—Is it in view of the Rs. 1,000 affair being there per horse-power?

Dr. R. NAGAN GOWDA.—May be.

Sri B. V. NARAYANA REDDY.—Do you know that Bagepalli and Gudibanda are the poorest taluks in the State and always drought-stricken and famine-stricken areas?

Dr. R. NAGAN GOWDA.—It is not always like that. I hope it is better now.

Sri B. V. NARAYANA REDDY.—Are you aware that it is so at least for the last four years?

Dr. R. NAGAN GOWDA.—As a matter of fact, we have similar conditions both in Tumkur and Chitaldrug Districts and other places and we are doing our best to supply current to these places. But there is a limit to our capacity. We cannot supply electric current to one or two pump sets at great expenditure. That will not be feasible.

Sri B. V. NARAYANA REDDY.—Will the Government accept that in comparison to other taluks, Bagepalli and Gudibanda are the poorest ones?

Dr. R. NAGAN GOWDA.—I hope they are not the poorest.

Sri B. V. NARAYANA REDDY.—Sir, will you see that estimates are made at least now ?

(No answer).

ಶ್ರೀ ಕೆ. ಪಿ. ಬ್ಯೈರೇಗೌಡ.—ಈ ಅಪ್ಲಿಕೇಷ್ಣಗಳನ್ನು ತಾವು ಜಾತಿವಾರ್ ವಿಂಗಡಿಸಿ ಕೊಟ್ಟಿದ್ದೀರಾ ?

ಡಾ॥ ಆರ್. ನಾಗನಗೌಡ.—ಆ ರೀತಿ ಮಾಡತಕ್ಕ ಅವಶ್ಯಕತೆ ಇಲ್ಲ. ಹಾಗೆ ಮಾಡುವುದೂ ಸರಿಯಾದುದಲ್ಲ. ಎಲ್ಲರಿಗೂ ಒಂದೇ ಸಮಾನವಾಗಿ ಕೊಡತಕ್ಕದ್ದು ಆವಶ್ಯಕ.

ಶ್ರೀ ಟಿ. ಎಣ್. ಮೂಡಲಗಿರಿಗೌಡ.—ತುಮಕೂರು, ಚಿತ್ರದುರ್ಗ ಜಿಲ್ಲೆಗಳಲ್ಲಿ ಒಂದು H. P.ಗೆ 1,500 ರೂಪಾಯಿಗಳಾದರೂ, ವಿದ್ಯುಚ್ಛಕ್ತಿಯನ್ನು ನರಬರಾಯಿ ಮಾಡಬೇಕೆಂದು ಮನವಿಗಳೇನಾದರೂ ಬಂದಿವಿಯೇ ?

ಡಾ॥ ಆರ್. ನಾಗನಗೌಡ.—ಈಗ ನಾವು 1.H.P.ಗೆ ಒಂದು ಸಾವಿರ ರೂಪಾಯಿಗಳೊಳಗೇ ಖರ್ಚು ಬರಬೇಕೆಂದು ನಿರ್ಧರಮಾಡಿದ್ದೇವೆ. ಇಷ್ಟಕ್ಕೂ ಸಹ ಸರಿಯಾಗಿ ರಿಟರ್ನ್ ಬರುವುದಿಲ್ಲ. ಬಹಳ ಕಡಮೆ ರಿಟರ್ನ್ ಬರುತ್ತದೆ. ನಾವು ಈ ಬಾಬುಗಳಿಗೆಲ್ಲಾ ಇನ್ವೆಸ್ಟ್ ಮಾಡಿರತಕ್ಕ ಮೊಬಲಗು ಹೊರಗಡೆಯಿಂದ ತಂದಿರತಕ್ಕದ್ದಾಗಿದೆ. ನಾವು ಹಾಗೆ ಹೊರಗಡೆಯಿಂದ ತಂದಿರತಕ್ಕ ಹಣಕ್ಕೆ ತೆರುವ ಬಡ್ಡಿ ಸಹ ನಮಗೆ ಈಗ ಸರಿಯಾಗಿ ಗಿಟ್ಟುತ್ತಿಲ್ಲ. ಆದುದರಿಂದ ಒಂದು, ಎರಡು ಕೇಳುವುದಕ್ಕೆ ಬದಲಾಗಿ, ಹತ್ತಾರು ಜನರು ಒಟ್ಟಾಗಿ ಸೇರಿ ಕೇಳುವಂತೆ ಮಾಡಿದರೆ ಬಹಳ ಅನುಕೂಲವಾದೀತು.

ಶ್ರೀ ಟಿ. ಎಣ್. ಮೂಡಲಗಿರಿಗೌಡ.—ಈ ಪ್ರದೇಶಗಳೆಲ್ಲಾ ಕ್ಷಾಮಪೀಡಿತ ಪ್ರದೇಶಗಳೆಂದು ಭಾವಿಸಿ ಸರ್ಕಾರದವರು ಸ್ವಲ್ಪ ಹೆಚ್ಚಿಗೆ ಖರ್ಚು ಬಂದರೂ ಅದನ್ನು ಅಂಗೀಕರಿಸಿ ಪವರ್‌ಕೊಡಲು ಆಲೋಚನೆ ಮಾಡುತ್ತೀರಾ ?

ಡಾ॥ ಆರ್. ನಾಗನಗೌಡ.—ಈ ಎರಡು ಮೂರು ವರ್ಷಗಳಲ್ಲೇ ನಾವು ನುಮಾರು ಒಂದೂವರೆ ಕೋಟಿ ರೂಪಾಯಿಗಳಷ್ಟನ್ನು ಈ ಬಾಬಿಗೆ ಹಾಕಿದ್ದೇವೆ. ಗೊತ್ತಿರುವ ಹಾಗೆಯೇ ಈ ಬಾಬಿನಿಂದ ಸಾಕಷ್ಟು ತಮಗೆರಿಟರ್ನ್ ಕೂಡ ಬರುತ್ತಿಲ್ಲ. ಹಣದ ಅಭಾವ ಬೇರೆ. ಆದುದರಿಂದ ಇನ್ನುಮುಂದೆ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿನಿಂದ ರೈತರಿಗೆ ಈ ಬಾಬುಗಳಲ್ಲಿ ಅನುಕೂಲ ಕಲ್ಪಿಸಬೇಕೆಂದು ಆಲೋಚನೆ ಇದೆ.

ಶ್ರೀ ಟಿ. ಎಣ್. ಮೂಡಲಗಿರಿಗೌಡ.—ಮೊನ್ನೆ ಹೋದ ರಾಮಮೂರ್ತಿ ಸಮಿತಿಯವರು ಆ ಪ್ರಾಂತ್ಯಕ್ಕೆ ಬಂದಿದ್ದಾಗ ಅಲ್ಲಿನ ಜನರನ್ನೆಲ್ಲಾ ಕರೆಸಿಕ್ಕೊಂಡು, ಮೀಟಿಂಗ್ ಮಾಡಿ, ಆ ಪ್ರದೇಶಕ್ಕೆ ಸ್ವಲ್ಪ ವಿನಾಯಿತಿ ತೋರಿಸಿ ಅನುಕೂಲ ಮಾಡಬೇಕಾಗದೆ ಅಗತ್ಯವಿದೆಯೆಂದು ಹೇಳಿರತಕ್ಕ ಅಂಶ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಡಾ॥ ಆರ್. ನಾಗನಗೌಡ.—ಮೊನ್ನೆತಾನೇ ಆ ಸಮಿತಿಯ ವರದಿ ನಮ್ಮ ಸರ್ಕಾರಕ್ಕೂ ಬಂದಿದೆ. ಅದು ನಮ್ಮಲ್ಲಿದೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಒಂದು ಬಾವಿಗೆ ಪಂಪುಹಾಕಿದ್ದಾಗ, ಅದರ ಪಕ್ಕದಲ್ಲೇ ಇನ್ನೊಂದು ಬಾವಿಗೆ ಪಂಪು ಹಾಕುವುದಕ್ಕೆ ಜನರು ಅವಕಾಶ ನೀಡಬೇಕೆಂದು ಕೇಳಿದರೆ, ಅವಕಾಶ ನೀಡುತ್ತೀರಾ ?

ಡಾ॥ ಆರ್. ನಾಗನಗೌಡ.—ಹಾಗೆ ಮಾಡಿದರೆ ಅದರಿಂದ ಬಹಳ ಪೊಟೆಗೇಷನ್ನಿಗೆ ಅವಕಾಶ ಉಂಟಾಗುತ್ತದೆ. ಮೇಲಾಗಿ ನೀರೂ ಸಹ ಬಹಳ ಹೊತ್ತು ತಡೆದು ಬರುವುದಿಲ್ಲ. ಬೇಗ ಬಾವಿ ಬರಿದಾಗುತ್ತದೆ. ಒಬ್ಬೊರಿಗೊಬ್ಬರು ಸಹಕರಿಸಿ ನಡೆದುಕೊಳ್ಳುವ ಮನೋಭಾವ ಜನರಿಗೆ ಇನ್ನೂ ಬಂದಿಲ್ಲ. ಒಂದು ಬಾವಿಗೇ ಎರಡು ಪಂಪುಗಳನ್ನು ಹಾಕುವುದು ಅನ್ ಎಕನಾಮಿಕಲ್.

Rajasabha.

Q.-74. **Sri S. SRINIVASA IYENGAR** (T.-Narasipur).—

Will the Government be pleased to state :—

(*a*) whether there was a Rajasabha from 8th October 1953 to 18th October 1953.

(*b*) under whose auspices the Rajasabha was arranged and the total amount of expenditure incurred (the names of departments directly or indirectly concerned and the expenditure booked against them may kindly be given) ;

(*c*) the nature of State business transacted each day ;

(*d*) the procedure adopted for the issue of invitations both to ladies and gentlemen for the Rajasabha ;

(*e*) whether any honours are given to the Chief Minister at the close of the Sabha each day ;

(*f*) the arrangements the Government have made to receive such honours on days the Chief Minister is absent in the Sabha ?

A.—**Sri K. HANUMANTHAIYA** (Chief Minister).—

(*a*) Yes, up to 17th October 1953

(*b*) It is not held under anybody's auspices. It is held as per previous practice and convention.

Regarding expenditure incurred please see Statement below.

(*c*) Ceremonial functions.

(*d*) The same procedure as in previous years was followed.

(*e*) A garland and "Veelya."

(*f*) In the absence of the Chief Minister the senior Minister placed in charge of Chief Minister's duties receives the honours.